ಓ ಎಸ್ ನಂ.57/2025

ಡಿ.ಡಬ್ಲ್ಯೂ-2 ಶಂಕರ ತಂದೆ ಶಾಮರಾಯ ಪರಿಯಾಣ

**(ಇಂದು ದಿನಾಂಕಃ 04-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಮುಖ್ಯ ವಿಚಾರಣೆಃ ಶ್ರೀ ಎಸ್ ಟಿ ಆರ್ ವಕೀಲರಿಂದ.

ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ನನ್ನ ಹೇಳಿಕೆಯ ಮೇರೆಗೆ ಅದನ್ನು ದಾಖಲಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದ ಕೂಡಿರುತ್ತವೆ ಎಂದು ಪ್ರಮಾಣಿಕರಿಸಿರುತ್ತೇನೆ.

ಪಾಟೀ ಸವಾಲುಃ ಶ್ರೀ ಎಂ ಎಸ್ ಪಿ ವಕೀಲರಿಂದ.

ವಾದಿ ರೇವಣಸಿದ್ದಪ್ಪರವರು ನನ್ನ ತಮ್ಮನಾಗಿರುತ್ತಾರೆ. ೧ನೇ ಪ್ರತಿವಾದಿ ದಾನಮ್ಮರವರು ನನ್ನ ಅಣ್ಣನಾದ ಚಂದಪ್ಪನ ಹೆಂಡತಿಯಾಗಿರುತ್ತಾರೆ. ೩ನೇ ಪ್ರತಿವಾದಿ ಸುರೇಖಾರವರು ನನ್ನ ಹೆಂಡತಿಯಾಗಿರುತ್ತಾರೆ. ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸರ್ವೆ ನಂಬರ ೧೭/೧ ರಲ್ಲಿ ೨ ಎಕರೆ ಜಮೀನು ಇದೆ ಎಂದರೆ ಸರಿ. ಸರ್ವೆ ನಂಬರ ೧೭/೪ ರಲ್ಲಿ ೧ ಎಕರೆ ಜಮೀನು ಇದೆ ಎಂದರೆ ಸರಿ. ನಮ್ಮ ತಂದೆಯ ಹೆಸರಿನಲ್ಲಿ ಒಟ್ಟು ೩ ಎಕರೆ ಜಮೀನು ಇದೆ ಎಂದರೆ ಸರಿ. ನಾನು ೧ ಎಕರೆ ಜಮೀನು ತೆಗೆದುಕೊಂಡು ನಾನು ಬೇರೆಯಾಗಿರುತ್ತೇನೆ ಎಂದರೆ ಸರಿ. ನನಗೆ ಮತ್ತು ವಾದಿಗೆ ಮತ್ತು ೧ನೇ ಪ್ರತಿವಾದಿಗೆ ೩ ಎಕರೆ ಜಮೀನಿನಲ್ಲಿ ಸಮನಾದ ಹಕ್ಕು ಇದೆ ಎಂದರೆ ಸರಿ. ವಾದಿ ರೇವಣಸಿದ್ದಪ್ಪರವರ ಪಾಲನ್ನು ನಾನು ನನ್ನ ಹೆಂಡತಿಯ ಹೆಸರಿನಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿ ರೇವಣಸಿದ್ದಪ್ಪರವರಿಗೆ ಆಸ್ತಿ ನೀಡಬಾರದು ಎಂದು ನಾನು ನನ್ನ ಹೆಂಡತಿಯಾದ ೩ನೇ ಪ್ರತಿವಾದಿಯ ಹೆಸರಿನಲ್ಲಿ ೧ ಎಕರೆ ಜಮೀನು ಮಾಡಿರುತ್ತೇನೆ ಎಂದರೆ

ಸರಿಯಲ್ಲ. ಸಾಕ್ಷಿಯು ೧ ಎಕರೆ ನನ್ನ ಪಾಲಿಗೆ ಬಂದ ಜಮೀನು ನನ್ನ ಹೆಂಡತಿಯ ಹೆಸರಿನಲ್ಲಿ ಇರುತ್ತದೆ. ೧ನೇ ಪ್ರತಿವಾದಿಯಾದ ದಾನಮ್ಮರವರ ಹೆಸರಿನಲ್ಲಿರುವ ಜಮೀನಿನಲ್ಲಿ ವಾದಿಗೆ ೧ ಎಕರೆ ಜಮೀನು ಹೋಗಬೇಕು ಎನ್ನುತ್ತಾರೆ. ವಾದಿಗೆ ಜಮೀನು ನೀಡಬಾರದು ಎಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ೧ನೇ ಪ್ರತಿವಾದಿ ಪರ ವಕೀಲರು ಯಾವುದೆ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.